# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 160ರಲ್ಲಿ ದಿನಾಂಕ: 20.02.2021 ರಂದು, ನಡೆದ ವಾರ್ಡ್‌ಕಮಿಟಿ ಸಭೆಯ ಸಭಾ ನಡವಳಿಗಳು

ದಿನಾಂಕ:20.02.2021 ರಂದು ವಾರ್ಡ್ ಸಂಖ್ಯೆ 160ರ ಫೆಬ್ರವರಿ ಮಾಹೆಯ ಮೂರನೇ ಶನಿವಾರದ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರುಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

### ❖ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳು

- ಕಸ ಸಂಗ್ರಹಿಸಲು ಹಾಗೂ ರಸ್ತೆ ಗುಡಿಸಲು ಬ್ಲಾಕ್ ವೈಸ್ ಮೈಕ್ರೋಪ್ಲಾನ್ ತಯಾರಿಸಿ ಕಾರ್ಯ ನಿರ್ವಹಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
- ವಾರ್ಡ್ ವ್ಯಾಪ್ತಿಯಲ್ಲಿ ಒಣ ಕಸ ಸಂಗ್ರಹಿಸಲು ಒಂದೊಂದು ಬ್ಲಾಕ್‌ಗೆ ಒಂದೊಂದು ಏಜೆನ್ಸಿಗೆ ಗುತ್ತಿಗೆ ನೀಡುವ ಬದಲು ಒಂದೇ ಏಜೆನ್ಸಿಗೆ ಗುತ್ತಿಗೆ ನೀಡಿದಲ್ಲಿ ಕಸದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆಂದು ನೋಡಲ್ ಅಧಿಕಾರಿಗಳು ಸೂಚಿಸಿದರು.
- ಮುಖ್ಯರಸ್ತೆಗಳಲ್ಲಿನ ವಾಣಿಜ್ಯ ಮಳಿಗೆಗಳಲ್ಲಿ ಹಾಗೂ ಅಂಗಡಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಪಾಲಿಕೆಯ ಗಾಡಿಗಳಿಗೆ ನೀಡದೇ ರಸ್ತೆ ಬದಿ ಸುರಿಯುತ್ತಿದ್ದು ಈ ಬಗ್ಗೆ ಕ್ರಮ ವಹಿಸುವಂತೆ ಸ.ಕಾ.ಅ (ಘ.ತ್ಯಾ.ನಿ) ರವರಿಗೆ ಸೂಚಿಸಲಾಯಿತು.
- ಬೇಸಿಗೆ ಆರಂಭವಾಗುವ ಮುನ್ನವೇ ಮರದ ಎಲೆಗಳು ಹೆಚ್ಚಾಗಿ ಉದುರುತ್ತಿದ್ದು, ಮರದ ಎಲೆ ವಿಲೇವಾರಿಗೊಳಿಸಲು ಸ್ಥಳಾವಕಾಶದ ಕೊರತೆ ಇರುವುದರಿಂದ ಲೀವ್ ಕಾಂಪೋಸ್ಟ್ ಯಂತ್ರಗಳನ್ನು ಖರೀದಿಸಿ ಕ್ರಮ ವಹಿಸಲು ಹಾಗೂ ಸದರಿ ವೆಚ್ಚವನ್ನು ಡಿ.ಸಿ.ಬಿಲ್ ಮುಖೇನ ಭರಿಸಲು ಸ.ಕಾ.ಅ (ಘ.ತ್ಯಾ.ನಿ) ರವರಿಗೆ ಸೂಚಿಸಲಾಯಿತು.
- ವಾರ್ಡ್ ಸಮಿತಿ ಸದಸ್ಯರಾದ ಶ್ರೀ ಎಸ್.ಆರ್.ಪಾಂಡುರಂಗ ರವರು ಸುಭಾಶ್ ಭವನ ಗ್ರೌಂಡ್ ಜಾಗದಲ್ಲಿ 7–8 ಟಿಪ್ಪರ್ ಲಾರಿಗಳಲ್ಲಿ ರಾತ್ರಿಯ ಸಮಯದಲ್ಲಿ ಮಣ್ಣು ಸುರಿಯುತ್ತಿದ್ದು ಸದರಿಯವರಿಗೆ ದಂಡ ವಿಧಿಸಿ ವಾಹನಗಳನ್ನು ಜಪ್ತಿ ಮಾಡಲು ಕ್ರಮ ವಹಿಸುವಂತೆ ವಾರ್ಡ್ ಸಂಖ್ಯೆ–160ರ ಮಾರ್ಷಲ್ ಗಳಿಗೆ ಕೋರಿದರು.
- ಮಾರ್ಷಲ್ ಗಳು ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುತ್ತಿರುವವರಿಗೆ ದಂಡ ವಿಧಿಸುತ್ತಿಲ್ಲವೆಂದು ಹಾಗೂ ರಸ್ತೆ ಬದಿ ಬೀದಿ ಬದಿ ವ್ಯಾಪಾರಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು, ಸ್ವಚ್ಛತೆ ಕಾಪಾಡುತ್ತಿಲ್ಲವೆಂದು ಎಸ್.ಆರ್. ಪಾಂಡುರಂಗ ರವರು ದೂರು ನೀಡಿದರು.
- ನಿಮಿಶಾಂಭ ದೇವಸ್ಥಾನದ ಬಳಿ ಪ್ಲಾಸ್ಟಿಕ್ ತ್ಯಾಜ್ಯ ಸುರಿಯುತ್ತಿದ್ದು ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಮಾರ್ಷಲ್ ಗಳು ಸೂಕ್ತ ಕ್ರಮ ವಹಿಸುವಂತೆ ಕೋರಲಾಯಿತು.

## ❖ ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಸಿಲ್ಟ್ & ಟ್ರಾಕ್ಟರ್ ಕಾಮಗಾರಿ ಕಾರ್ಯಾದೇಶ ಈಗಾಗಲೇ ದೊರೆತಿದೆಯೆಂದು ಹಿಂದಿನ ಸಭೆಯಲ್ಲಿ ತಿಳಿಸಿರುತ್ತೀರಿ ಅದರಂತೆ ಐಡಿಯಲ್ ಹೋಮ್ಸ್ ಬಡಾವಣೆಯ ಡೆಬ್ರಿಸ್ ತೆರವುಗೊಳಿಸಲು ಹಿಂದಿನ ಸಭೆಯಲ್ಲಿ ಸೂಚಿಸಿದ್ದು ಯಾವ ಕ್ರಮ ತೆಗೆದುಕೊಂಡಿರುವಿರೆಂದು ನೋಡಲ್ ಅಧಿಕಾರಿಗಳು ಸಹಾಯಕ ಅಭಿಯಂತರರನ್ನು ವಿಚಾರಿಸಲಾಗಿ ಉತ್ತರಿಸಿದ ಸಹಾಯಕ ಅಭಿಯಂತರರು ಈಗಾಗಲೇ ಆದ್ಯತೆಯ ಮೇರೆಗೆ ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸಲು ಕ್ರಮ ವಹಿಸುತ್ತಿದ್ದು ಮುಂದಿನ ವಾರದಲ್ಲಿ ಐಡಿಯಲ್ ಹೋಮ್ಸ್ ಬಡಾವಣೆಯಲ್ಲಿನ ರಸ್ತೆ ಬದಿ ಚರಂಡಿಯಲ್ಲಿನ ಹೂಳು ತೆಗೆಯಲಾಗುವುದೆಂದು ತಿಳಿಸಿದರು
- ವಾರ್ಡ್ ವ್ಯಾಪ್ತಿಯಲ್ಲಿನ ಡೆಬ್ರಿಸ್ ತೆರವುಗೊಳಿಸಿ ತಗಲುವ ವೆಚ್ಚವನ್ನು ಡಿ.ಸಿ.ಬಿಲ್ ಮುಖೇನ ಪಾವತಿಸಲು ಮಾನ್ಯ ಜಂಟಿ ಆಯುಕ್ತರಿಂದ ಅನುಮೋದನೆ ದೊರೆಯದ ಕಾರಣ, ಪಿ.ಓ.ಡಬ್ಲೂ ಅಥವಾ ಬೇರೆ ಇನ್ಯಾವುದೇ ಲಭ್ಯ ಅನುದಾನದಲ್ಲಿ ಡೆಬ್ರಿಸ್ ತೆರವುಗೊಳಿಸಲು ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ಸಹಾಯಕ ಅಭಿಯಂತರರಿಗೆ ಸೂಚಿಸಿದರು.
- ಸುಭಾಶ್ ಗ್ರೌಂಡ್ ಅಭಿವೃದ್ಧಿಪಡಿಸಲು ಕಳೆದ ಸಭೆಗಳಲ್ಲಿ ಚರ್ಚಿಸಲಾಗಿದ್ದರೂ ಕಾರ್ಯರೂಪಕ್ಕೆ ಬಂದಿರುವುದಿಲ್ಲವೆಂದು ಅಲ್ಲಿನ ನಿವಾಸಿಗಳು ದೂರು ನೀಡಿದರು ಹಾಗೂ ಅಲ್ಲಿಯವರೆಗೆ ಮೈದಾನದ ಸುತ್ತಲೂ ಫೆನ್ಸಿಂಗ್ ನಿರ್ಮಿಸಿ ಡೆಬ್ರಿಸ್ ಹಾಗೂ ಮಣ್ಣು ಸುರಿಯುವುದನ್ನು ತಪ್ಪಿಸಲು ಕೋರಿದರು.
- ಪದ್ಮಾವತಿ ಕಲ್ಯಾಣ ಮಂಟಪ ರಸ್ತೆ ಅಭಿವೃದ್ಧಿಪಡಿಸಲು ಅಲ್ಲಿನ ನಿವಾಸಿಯೋರ್ವರು ಕೋರಿದರು ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಸದರಿ ರಸ್ತೆ ಹಾಗೂ ಚರಂಡಿಗಳನ್ನು ಅಭಿವೃದ್ಧಿಪಡಿಸಲು ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದ್ದು ಅನುಮೋದನೆ ದೊರೆತ ನಂತರ ಕಾಮಗಾರಿ ಪ್ರಾರಂಭಿಸಲಾಗುವುದೆಂದು ತಿಳಿಸಿದರು.
- ಹೊಸಕೆರೆಹಳ್ಳಿ ಕೆರೆ ಫುಟ್ ಪಾತ್ ಅಭಿವೃದ್ಧಿಪಡಿಸಲು ಕೋರಲಾಯಿತು.
- ಜವರೇಗೌಡ ನಗರ ನಿವಾಸಿಗಳು ಜವರೇಗೌಡ ನಗರ ಮುಖ್ಯರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಪಡಿಸಲು ಕೋರಿದರು ಹಾಗೂ ಅಡ್ಡರಸ್ತೆಗಳಲ್ಲಿ ಚರಂಡಿ ಅಭಿವೃದ್ಧಿಪಡಿಸಿದ ನಂತರ ಮಣ್ಣನ್ನು ತೆರವುಗೊಳಿಸಿರುವುದಿಲ್ಲ ಹಾಗೂ ಸ್ಲಾಬ್ ಮುಚ್ಚಿರುವುದಿಲ್ಲವೆಂದು ದೂರು ನೀಡಿದರು.

ಕ್ರಮ:ಸಹಾಯಕ ಅಭಿಯಂತರರು ವಾರ್ಡ್–160/ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಜರಾಜೇಶ್ವರಿ ನಗರ ಉಪ ವಿಭಾಗ

- ಜಯಣ್ಣ ಸರ್ಕಲ್ ನಿಂದ ರಾಜರಾಜೇಶ್ವರಿ ನಗರ ಆರ್ಚ್ ವರೆಗೆ ರಸ್ತೆ ಬದಿ ಬೀದಿ ಬದಿ ವ್ಯಾಪಾರಿಗಳು ಹಾಗೂ ವಾಣಿಜ್ಯ ಮಳಿಗೆಗಳ ಮಾಲೀಕರು ಫುಟ್ ಪಾತ್ ಒತ್ತುವರಿ ಮಾಡಿಕೊಂಡು ವ್ಯಾಪಾರ ನಡೆಸುತ್ತಿದ್ದು, ಫುಟುಪಾತ್ ಒತ್ತುವರಿ ತೆರವುಗೊಳಿಸಲು ಮುಂದಿನ ಸಭೆಯೊಳಗೆ ಫುಟ್ ಪಾತ್ ಡ್ರೈವ್ ಕಾರ್ಯಕ್ರಮ ಹಮ್ಮಿಕೊಳ್ಳಲು ದಿನಾಂಕ ನಿಗಧಿಪಡಿಸುವಂತೆ ಸಾರ್ವಜನಿಕರು ಕೋರಿದರು.
- ಶ್ರೀಮತಿ ಸವಿತಾರವರು ಬಾಲಕೃಷ್ಣ ರಂಗಮಂದಿರದ ಆವರಣದಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಮಕ್ಕಳಿಗೆ ಆಟವಾಡಲು ಸಾಧ್ಯವಾಗುತ್ತಿಲ್ಲವೆಂದು ದೂರು ನೀಡಿದರು ಹಾಗೂ ರಂಗಮಂದಿರವನ್ನು ಅಭಿವೃದ್ಧಿಪಡಿಸಲು ಕೋರಿದರು. ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ವಾಹನಗಳು ಒಳ ಪ್ರವೇಶಿಸದಂತೆ ರಂಗಮಂದಿರದ ಮುಖ್ಯ ದ್ವಾರದ ಗೇಟ್ ಗೆ ಇಂದೇ ಬೀಗ ಹಾಕಿಸಿ ಪಕ್ಕದಲ್ಲಿರುವ ರಿವಾಲ್ವಿಂಗ್ ಗೇಟ್ ಮುಖಾಂತರ ಮಾತ್ರ ಪ್ರವೇಶಿಸಲು ಅವಕಾಶ ಕಲ್ಪಿಸಲಾಗುವುದೆಂದು ತಿಳಿಸಿದರು.

- ಮೈಸೂರು ರಸ್ತೆಯಿಂದ ಪಂತರಪಾಳ್ಯ ಮುಖಾಂತರ ಪ್ರಮೋದ್ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಅಭಿವೃದ್ಧಿಪಡಿಸುವಂತೆ ನಾಗರೀಕರು ಕೋರಿದರು. ಇದಕ್ಕೆ ವಾರ್ಡ್ ನ ಸಹಾಯಕ ಅಭಿಯಂತರರು ಮುಂದಿನ ದಿನಗಳಲ್ಲಿ ದೊರೆಯುವ ಅನುದಾನದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು.

## ❖ ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಇಂಡಿಯನ್ ಬ್ಯಾಂಕ್ ಕಾಲೋನಿಯ ಚರ್ಚ್ ಹಿಂಭಾಗದ ರಸ್ತೆ, ರಾಜರಾಜೇಶ್ವರಿ ದೇವಸ್ಥಾನದ ರಸ್ತೆ ಹಾಗೂ ಪದ್ಮಾವತಿ ಕಲ್ಯಾಣ ಮಂಟಪ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ರಸ್ತೆ ಅಗೆದ ನಂತರ ರಸ್ತೆ ಮರುಪೂರಣಗೊಳಿಸದಿರುವುದರಿಂದ ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗೊಂಡಿರುತ್ತಾರೆಂದು ತಿಳಿಸಿ, ತುರ್ತಾಗಿ ರಸ್ತೆ ಸರಿಪಡಿಸುವಂತೆ ಕೋರಿದರು.
- ನೀರಿನ ಬಿಲ್ ಆನ್ ಲೈನ್ ಪಾವತಿಯ ಸಮಯದಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗುತ್ತಿದ್ದು ಇದರಿಂದ ಸರಿಯಾದ ಸಮಯಕ್ಕೆ ಪಾವತಿಸಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಛೇರಿಗೆ ಬಿಲ್ ಪಾವತಿಸಲು ತೆರಳಿದರೂ ಅಲ್ಲಿಯೂ ಇದೇ ನೆಪ ಹೇಳಿ ಕಳುಹಿಸುತ್ತಿದ್ದು, ತುಂಬಾ ದಿನಗಳಿಂದ ಇದೇ ಪರಿಸ್ಥಿತಿ ಇದ್ದು ಶೀಘ್ರವಾಗಿ ಸಮಸ್ಯೆ ಬಗೆಹರಿಸಲು ಐಡಿಯಲ್ ಹೋಮ್ ನಿವಾಸಿಯಾದ ಶ್ರೀಮತಿ ವಾಣಿರವರು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು Instrument ಬದಲಿಸಲು ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸೂಚಿಸಿದರು.

## ❖ ಯೋಜನಾ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಸುಭಾಶ್ ಗ್ರೌಂಡ್ ಅಭಿವೃದ್ಧಿಪಡಿಲು ಕಳೆದ ಒಂದೂವರೆ ವರ್ಷದಿಂದ ಪ್ರತೀ ಸಭೆಯಲ್ಲೂ ಚರ್ಚಿಸಲಾಗುತ್ತಿದ್ದು ಯಾವುದೇ ಪ್ರಗತಿಯಾಗಿರುವುದಿಲ್ಲವೆಂದು ಸಾರ್ವಜನಿಕರು ದೂರಿದ ಮೇರೆಗೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಕಾಮಗಾರಿ ಹಾಗೂ ಯೋಜನಾ ವಿಭಾಗದಿಂದ ಜಂಟಿಯಾಗಿ ಸ್ಥಳ ಪರಿಶೀಲಿಸಿ ಸದರಿ ಮೈದಾನ ಅಭಿವೃದ್ಧಿಪಡಿಸಲು ತುರ್ತಾಗಿ ಕ್ರಮ ವಹಿಸುವಂತೆ ಸೂಚಿಸಿದರು.

## ❖ ಬೆಸ್ಕಾಂ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಬೆಸ್ಕಾಂ ವತಿಯಿಂದ ರಸ್ತೆ ಅಗೆದ ನಂತರ ರಸ್ತೆ ಮರುಪೂರಣಗೊಳಿಸದಿರುವುದರಿಂದ ರಸ್ತೆ ಗುಂಡಿಗಳು ಉಂಟಾಗಿ ದ್ವಿಚಕ್ರ ವಾಹನ ಸವಾರರು ಬೀಳುವ ಸಂಭವವಿದ್ದು, ತುರ್ತಾಗಿ ರಸ್ತೆ ಸರಿಪಡಿಸುವಂತೆ ಸಾರ್ವಜನಿಕರು ಕೋರಿದರು.
- ಬೆಸ್ಕಾಂ ವತಿಯಿಂದ ವಿದ್ಯುತ್ ಲೈನ್ ಗೆ ತಗಲುವ ಸಂಭವವಿರುವ ಮರದ ರೆಂಬೆಗಳನ್ನು ತೆರವುಗೊಳಿಸಿದ ನಂತರ ಪಾಲಿಕೆಯ ಖಾಲಿ ಸ್ಥಳ ಗುರುತಿಸಿ ಸಂಗ್ರಹಿಸಿ ಒಂದು ವಾರದೊಳಗೆ ವಿಲೇವಾರಿ ಮಾಡಲು ಸೂಚಿಸಲಾಯಿತು.
- ಐಡಿಯಲ್ ಹೋಮ್ ಬಡಾವಣೆ ನಿವಾಸಿಯಾದ ಶ್ರೀಮತಿ ವಾಣಿರವರು ಮರದ ರೆಂಬೆಗಳನ್ನು ತೆರವುಗೊಳಿಸಿ ಬೆಸ್ಕಾಂ ಕಟ್ಟಡದ ಕಾಂಪೌಂಡ್ ಒಳಗೆ ಸಂಗ್ರಹಿಸಿ ನಂತರ ವಿಲೇವಾರಿಗೊಳಿಸಲು ಸಲಹೆ ನೀಡಿದರು ಇದಕ್ಕೆ ಪ್ರತಿಕ್ರಿಯಿಸಿದ ಕಿರಿಯ ಅಭಿಯಂತರರು

ಸದರಿ ಜಾಗದಲ್ಲಿ ಉಪ ವಿಭಾಗ ಕಛೇರಿಯ ಕಟ್ಟಡ ನಿರ್ಮಿಸಲು ಅನುಮೋದನೆ ದೊರೆತಿದ್ದು ಶೀಘ್ರದಲ್ಲಿ ಕಾಮಗಾರಿ ಪ್ರಾರಂಭಿಸಲಾಗುವುದೆಂದು ತಿಳಿಸಿದರು.

- ಬೆಸ್ಕಾಂ ವತಿಯಿಂದ ಭೂಗತ ಕೇಬಲ್ ಅಳವಡಿಸುವ ಕಾಮಗಾರಿ ಪ್ರಾರಂಭಿಸುವ ಮನ್ನ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ತಿಳಿಯುವಂತೆ ಸುರಕ್ಷತಾ ಫಲಕಗಳನ್ನು/ಬ್ಯಾರಿಕೇಡ್ ಗಳನ್ನು ಅಳವಡಿಸಿ ಕಾಮಗಾರಿ ನಿರ್ವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.

## ❖ ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಕೆಂಪೇಗೌಡ ಜೋಡಿ ರಸ್ತೆಯಲ್ಲಿ ಬೀದಿ ದೀಪಗಳು ಬೆಳಗುತ್ತಿಲ್ಲವೆಂದು ದೂರು ನೀಡಿ ಸೂಕ್ತ ಕ್ರಮ ವಹಿಸುವಂತೆ ಸಾರ್ವಜನಿಕರು ಕೋರಿದರು.

ಸಹಿ/–

ಸದಸ್ಯ ಕಾರ್ಯದರ್ಶಿಗಳು ವಾರ್ಡ್ ಸಮಿತಿ

ವಾರ್ಡ್ ಸಂಖ್ಯೆ–160.

***<u>ಪ್ರತಿಯನ್ನು:–</u>***

1.ನೋಡಲ್ ಅಧಿಕಾರಿಗಳು, ವಾರ್ಡ್–160.

2.ಜಂಟಿ ಆಯುಕ್ತರು, ರಾರಾನಗರ ವಲಯ.

3.ಮುಖ್ಯ ಅಭಿಯಂತರರು, ರಾರಾನಗರ ವಲಯ.

4.ಕಾರ್ಯಪಾಲಕ ಅಭಿಯಂತರರು, ರಾರಾನಗರ ವಿಭಾಗ.

5.ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

6.ವಾರ್ಡ್ ಸಮಿತಿ ಸದಸ್ಯರುಗಳಿಗೆ.

7.ಕಛೇರಿ ಪ್ರತಿ.